**ಕರ್ನಾಟಕ ಸರ್ಕಾರ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

**ನೋವೆಲ್ ಕರೋನಾ ವೈರಸ್ (ಕೋವಿಡ್–19)**

**ಪತ್ರಿಕಾ ಪ್ರಕಟಣೆ**

**ದಿನಾಂಕ: 28.04.2020** **ಸಂಜೆಯ ವರದಿ**

ಇಲ್ಲಿಯವರೆಗೆ ಭಾರತವೂ ಸೇರಿದಂತೆ **213** ದೇಶ / ಪ್ರದೇಶಗಳನ್ನು ಬಾಧಿಸಿರುವ ಇತ್ತೀಚಿನ ನೋವೆಲ್ ಕರೋನಾ ವೈರಸ್‌ನ್ನು (ಕೋವಿಡ್–19) ಅಂತರಾಷ್ಟ್ರೀಯ ಆತಂಕದ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ (ಪಿಹೆಚ್‌ಇಸಿ) ಎಂದು ವಿಶ್ವ ಆರೋಗ್ಯ ಸಂಸ್ಥೆಯು ಘೋಷಿಸಿದೆ. 11ನೇ ಮಾರ್ಚ್ 2020 ರಂದು ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್–19 ವನ್ನು ಸರ್ವವ್ಯಾಪಿ ರೋಗ ಎಂದು ಘೋಷಿಸಿದೆ.

ಈ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ರೋಗ ತಡೆಗಟ್ಟುವ ಮುಂಜಾಗ್ರತಾ ಕ್ರಮಗಳನ್ನು ಹಾಗೂ ಎಲ್ಲಾ ರೀತಿಯ ಸರ್ವೇಕ್ಷಣೆಯನ್ನು ಮತ್ತು ಸಮೂಹ ನಿಯಂತ್ರಣ ಕಾರ್ಯತಂತ್ರಗಳನ್ನು ಬಲಪಡಿಸಿದೆ. ಅಂತರಾಷ್ಟ್ರೀಯ ಪ್ರಯಾಣ ಹಿನ್ನಲೆ ಹೊಂದಿರುವ ಎಲ್ಲರ ಸಾರ್ವತ್ರಿಕ ತಪಾಸಣೆ ಮುಂದುವರೆದಿದೆ.

**"ದಿನಾಂಕ 28.04.2020, ಸಾಯಂಕಾಲ 5.00 ಗಂಟೆಯ ವರದಿಯಂತೆ, ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 523 ಕೋವಿಡ್–19 ಖಚಿತಪಟ್ಟ ಪ್ರಕರಣಗಳಿರುತ್ತವೆ.**
**+1 ಮರಣ ಕೋವಿಡ್–19 ವಲ್ಲದ ಅನ್ಯ ಕಾರಣ**
**ಅವುಗಳ ಪೈಕಿ 20 ಮರಣ ಮತ್ತು 207 ಜನ ಬಿಡುಗಡೆ ಹೊಂದಿರುತ್ತಾರೆ."**

- ಕೋವಿಡ್–19 ಪೀಡಿತ ಒಟ್ಟು **295** ವ್ಯಕ್ತಿಗಳಲ್ಲಿ, **288** ರೋಗಿಗಳು ಗೊತ್ತುಪಡಿಸಿದ ಆಸ್ಪತ್ರೆಗಳ ಪ್ರತ್ಯೇಕ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಇವರ ಆರೋಗ್ಯವು ಸ್ಥಿರವಾಗಿರುತ್ತದೆ ಹಾಗೂ 07 **ವ್ಯಕ್ತಿಗಳನ್ನು ಐ.ಸಿ.ಯು.ನಲ್ಲಿ** (P-101, P-247, P-298, P-349, P369, P409 & P-419) ಇಡಲಾಗಿರುತ್ತದೆ.

- ದಿನಾಂಕ 27.04.2020, ಸಂಜೆ 5:00 ರಿಂದ ದಿನಾಂಕ 28.04.2020 ಸಂಜೆ 5:00 ರವರೆಗೆ ರಾಜ್ಯದಲ್ಲಿ **11** ಹೊಸ ಕೋವಿಡ್ –19 ಖಚಿತ ಪ್ರಕರಣಗಳು ಪತ್ತೆಯಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

| ಕ್ರಮ ಸಂಖ್ಯೆ | ಪ್ರಕರಣ ಸಂಖ್ಯೆ | ವಯಸ್ಸು (ವರ್ಷಗಳಲ್ಲಿ) | ಲಿಂಗ | ವಾಸ ಸ್ಥಳ | ಪ್ರಯಾಣದ ಹಿನ್ನಲೆ / ಸಂಪರ್ಕ | ಪ್ರತ್ಯೇಕಿಸಿದ ಆಸ್ಪತ್ರೆ |
|---|---|---|---|---|---|---|
| 1 | P-513 | 48 | ಗಂಡು | ಬೆಂಗಳೂರು ನಗರ | ಬಿಬಿಎಂಪಿ, ಬೆಂಗಳೂರಿನ ಕಂಟೈನ್ಮೆಂಟ್ ಜೋನ್, 135 ವಾರ್ಡ್ ರ ಸಂಪರ್ಕ | ನಿಗಧಿತ ಆಸ್ಪತ್ರೆ, ಬೆಂಗಳೂರು ನಗರ |
| 2 | P-514 | 75 | ಗಂಡು | ಗದಗ | ತೀವ್ರತರ ಉಸಿರಾಟದ ತೊಂದರೆಯ ಸೋಂಕು (SARI) | ನಿಗಧಿತ ಆಸ್ಪತ್ರೆ, ಗದಗ |
| 3 | P-515 | 55 | ಗಂಡು | ಕಲಬುರಗಿ | P-425 ರ ಸಂಪರ್ಕ | ನಿಗಧಿತ ಆಸ್ಪತ್ರೆ, ಕಲಬುರಗಿ |
| 4 | P-516 | 40 | ಹೆಣ್ಣು | ಕಲಬುರಗಿ | P-425 ರ ಸಂಪರ್ಕ | ನಿಗಧಿತ ಆಸ್ಪತ್ರೆ ಕಲಬುರಗಿ |
| 5 | P-517 | 43 | ಗಂಡು | ಕಲಬುರಗಿ | P-425 ರ ಸಂಪರ್ಕ | ನಿಗಧಿತ ಆಸ್ಪತ್ರೆ, ಕಲಬುರಗಿ |
| 6 | P-518 | 28 | ಹೆಣ್ಣು | ಕಲಬುರಗಿ | P-425 ರ ಸಂಪರ್ಕ | ನಿಗಧಿತ ಆಸ್ಪತ್ರೆ, |

| | | | | | | |
|---|---|---|---|---|---|---|
| | | | | | | ಕಲಬುರಗಿ |
| 7 | P-519 | 45 | ಹೆಣ್ಣು | ಕಲಬುರಗಿ | P-425 ರ ಸಂಪರ್ಕ | ನಿಗಧಿತ ಆಸ್ಪತ್ರೆ, ಕಲಬುರಗಿ |
| 8 | P-520 | 22 | ಹೆಣ್ಣು | ಕಲಬುರಗಿ | P-425 ರ ಸಂಪರ್ಕ | ನಿಗಧಿತ ಆಸ್ಪತ್ರೆ, ಕಲಬುರಗಿ |
| 9 | P-521 | 20 | ಹೆಣ್ಣು | ಬಾಗಲಕೋಟೆ | P-381 ರ ಸಂಪರ್ಕ | ನಿಗಧಿತ ಆಸ್ಪತ್ರೆ, ಬಾಗಲಕೋಟೆ |
| 10 | P-522 | 11 | ಗಂಡು | ಬಾಗಲಕೋಟೆ | P- 456 ರ (Secondary) ಸಂಪರ್ಕ | ನಿಗಧಿತ ಆಸ್ಪತ್ರೆ, ಬಾಗಲಕೋಟೆ |
| 11 | P-523 | 22 | ಗಂಡು | ಬಾಗಲಕೋಟೆ | P-381 ರ ಸಂಪರ್ಕ | ನಿಗಧಿತ ಆಸ್ಪತ್ರೆ, ಬಾಗಲಕೋಟೆ |

**ಮರಣ:** P-422, 57 ವರ್ಷದ ಪುರುಷ ಕಲಬುರಗಿ ಜಿಲ್ಲೆಯ ನಿವಾಸಿ, ತೀವ್ರತರ ಉಸಿರಾಟದ ಸೋಂಕಿನ ತೊಂದರೆಯಿಂದ ದಿ: 21/04/2020 ರಂದು ಕಲಬುರಗಿಯ ನಿಗಧಿತ ಆಸ್ಪತ್ರೆಯಲ್ಲಿ ದಾಖಲಾಗಿರುತ್ತಾರೆ. ಇವರು ದೀರ್ಘಕಾಲಿನ ಯಕೃತ ಸಂಭಂದಿ ಖಾಯಿಲೆಯಿಂದ ಬಳಲುತ್ತಿದ್ದರು, ದಿ: 27/04/2020 ರಂದು ಕಲಬುರಗಿ ಜಿಲ್ಲೆಯ ನಿಗಧಿತ ಆಸ್ಪತ್ರೆಯಲ್ಲಿ ನಿಧನರಾದರು.

| **ಕೋವಿಡ್–19 ಜಿಲ್ಲಾವಾರು ಸಂಕ್ಷಿಪ್ತ ವರದಿ** | | | | | | |
|---|---|---|---|---|---|---|
| **ಕ್ರಮ ಸಂಖ್ಯೆ** | **ಜಿಲ್ಲೆಯ ಹೆಸರು** | **ಸೋಂಕಿತರು** | **ಬಿಡುಗಡೆಯಾದವರ ಸಂಖ್ಯೆ** | **ಸಕ್ರಿಯ ಪ್ರಕರಣಗಳು** | **ಮರಣ ಹೊಂದಿದವರ ಸಂಖ್ಯೆ** | **ಮರಣ (ಕೋವಿಡ್–19 ವಲ್ಲದ ಅನ್ಯ ಕಾರಣ)** |
| 1 | ಬೆಂಗಳೂರು ನಗರ | 131 | 58 | 67 | 5 | 01 |
| 2 | ಮೈಸೂರು | 87 | 48 | 39 | 0 | 0 |
| 3 | ಬೆಳಗಾವಿ | 52 | 06 | 45 | 1 | 0 |
| 5 | ವಿಜಯಪುರ | 41 | 06 | 33 | 02 | 0 |
| 4 | ಕಲಬುರಗಿ | 44 | 07 | 32 | 05 | 0 |
| 6 | ಬಾಗಲಕೋಟೆ | 29 | 06 | 22 | 01 | 0 |
| 7 | ಚಿಕ್ಕಬಳ್ಳಾಪುರ | 18 | 11 | 05 | 02 | 0 |
| 8 | ದಕ್ಷಿಣ ಕನ್ನಡ | 15 | 06 | 07 | 02 | 0 |
| 9 | ಬೀದರ್ | 14 | 08 | 06 | 0 | 0 |
| 10 | ಮಂಡ್ಯ | 18 | 04 | 14 | 0 | 0 |
| 11 | ಬಳ್ಳಾರಿ | 13 | 05 | 08 | 0 | 0 |
| 12 | ಬೆಂಗಳೂರು ಗ್ರಾಮಾಂತರ | 06 | 06 | 0 | 0 | 0 |
| 13 | ಉತ್ತರ ಕನ್ನಡ | 11 | 10 | 01 | 0 | 0 |
| 14 | ಧಾರವಾಡ | 09 | 02 | 07 | 0 | 0 |
| 15 | ಗದಗ | 05 | 0 | 04 | 01 | 0 |
| 16 | ಉಡುಪಿ | 03 | 03 | 0 | 0 | 0 |
| 17 | ದಾವಣಗೆರೆ | 02 | 02 | 0 | 0 | 0 |
| 18 | ತುಮಕೂರು | 03 | 01 | 01 | 01 | 0 |
| 19 | ಚಿತ್ರದುರ್ಗ | 01 | 01 | 0 | 0 | 0 |

| | | | | | | |
|---|---|---|---|---|---|---|
| 20 | ಕೊಡಗು | 01 | 01 | 0 | 0 | 0 |
| 21 | *ಇತರೆ | 20 | 16 | 04 | 0 | 0 |
| **ಒಟ್ಟು** | | **523** | **207** | **295** | **20** | **1** |

* ಇತರೆಯು , ಅನ್ಯ ರಾಜ್ಯದ ಹಾಗು ಅಂತಾರಾಷ್ಟ್ರೀಯ ಕ್ವಾರೆಂಟೀನ್

- **ಇಂದು ಆಸ್ಪತ್ರೆಯಿಂದ ಬಿಡುಗಡೆಯಾದವರ ಸಂಖ್ಯೆ – 14**

.

1. ಬೆಂಗಳೂರು ನಗರ (5) : P-130, P-153, P-190, P-217 & P-218
2. ಮೈಸೂರು (7) : P-140, P-159, P-201, P-213, P-216, P-311 & P-312.
3. ಬೆಂಗಳೂರು ಗ್ರಾಮಾಂತರ (1) :P-246
4. ಇತರೆ (1) : P-108

ಮರಣ ಸಂಖ್ಯೆ – **19**

(P-6, P-53, P-60, P-125, P-166, P-177, P-195, P-205, P-219, P-250, P-252, P-257, P-279, P-281, P-374, P-390,P-414,P-422, P-432 & P-465)

ಎಲ್ಲಾ ಕೋವಿಡ್–19 ಸೋಂಕಿತ ವ್ಯಕ್ತಿಗಳ ಸಂಪರ್ಕದಲ್ಲಿರುವವರನ್ನು ಪತ್ತೆ ಹಚ್ಚುವ ಕಾರ್ಯ ಜಾರಿಯಲ್ಲಿರುತ್ತದೆ.

**ಸೂಚನೆ:** ಕರ್ನಾಟಕದಲ್ಲಿ ಪತ್ತೆ ಮಾಡಲಾಗಿರುವ **523** ಪ್ರಕರಣಗಳಲ್ಲಿ **9** ಪ್ರಕರಣಗಳು ಕೇರಳದವರಾಗಿರುತ್ತಾರೆ. ಅವರು ಕರ್ನಾಟಕದ ವಿಮಾನ ನಿಲ್ದಾಣಗಳ ಮೂಲಕ ಕೇರಳಕ್ಕೆ ಪ್ರಯಾಣಿಸುತ್ತಿರುವಾಗ ಪತ್ತೆ ಮಾಡಿ, ಅವರಿಗೆ ಕರ್ನಾಟಕದಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ.

| **ಸಂಕ್ಷಿಪ್ತ ವರದಿ** | | | |
|---|---|---|---|
| | **ಚಟುವಟಿಕೆಗಳು** | **ಒಟ್ಟು** | |
| | | **ಇಂದಿನ** | **ಸಂಚಿತ** |
| **A** | ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ತಪಾಸಣೆಗೊಳಪಟ್ಟ ಒಟ್ಟು ಪ್ರಯಾಣಿಕರು | 46 | 140531 |
| **B** | ನಿಗಾವಣೆಯಲ್ಲಿರುವ ಒಟ್ಟು ಸಂಪರ್ಕ ವ್ಯಕ್ತಿಗಳು<br>ಪ್ರಥಮ<br>ದ್ವಿತೀಯ | 5861<br>18082 | |
| **C** | **ನಿಗಾವಣೆಯಲ್ಲಿರುವ ಒಟ್ಟು ವ್ಯಕ್ತಿಗಳು** | **23943** | |
| **D** | ಆರೋಗ್ಯ ಕೇಂದ್ರಗಳಲ್ಲಿನ ಒಟ್ಟು ಪ್ರತ್ಯೇಕಿತ ವ್ಯಕ್ತಿಗಳು | 174 | 966 |
| **E** | ಒಟ್ಟು ಪರೀಕ್ಷಿಸಿದ ಮಾದರಿಗಳು | 4827 | 50512 |
| **F** | ನೆಗೆಟಿವ್ ವರದಿಯಾದ ಒಟ್ಟು ಮಾದರಿಗಳು | 4717 | 48508 |
| | **ಕೋವಿಡ್–19 ಖಚಿತವಾದ (ಪಾಸಿಟಿವ್) ಒಟ್ಟು ಮಾದರಿಗಳು** | **11** | **523** |

*** ಮಂಗಳೂರು ಬಂದರು –46 .**

| **ಗದಿತ ಆಸ್ಪತ್ರೆಗಳಲ್ಲಿ ಶಂಕಿತ ವ್ಯಕ್ತಿಗಳನ್ನು ಪ್ರತ್ಯೇಕವಾಗಿರಿಸಲ್ಪಟ್ಟವರ ವಿವರ** | | | | |
|---|---|---|---|---|
| **ಕ್ರಮ ಸಂಖ್ಯೆ** | **ಜಿಲ್ಲೆಯ ಹೆಸರು** | **ಇಂದಿನ ಹೊಸ ದಾಖಲಾತಿ** | **ಇಂದಿನ ಒಟ್ಟು ಬಿಡುಗಡೆ** | **ಒಟ್ಟು ಪ್ರತ್ಯೇಕಗೊಳಿಸಲಾಗಿರುವವರು** |
| 1 | ಬಾಗಲಕೋಟೆ | 4 | 1 | 28 |
| 2 | ಬಳ್ಳಾರಿ | 0 | 0 | 8 |
| 3 | ಬೆಳಗಾವಿ | 0 | 0 | 47 |
| 4 | ಬೆಂಗಳೂರು ಗ್ರಾಮಾಂತರ | 0 | 2 | 7 |
| 5 | ಬೆಂಗಳೂರು ನಗರ (ನಿಗದಿತ ಆಸ್ಪತ್ರೆಗಳು) | 31 | 70 | 135 |

| | | | | |
|---|---|---|---|---|
| 6 | ಬೀದರ್ | 2 | 0 | 91 |
| 7 | ಚಾಮರಾಜನಗರ | 0 | 0 | 3 |
| 8 | ಚಿಕ್ಕಬಳ್ಳಾಪುರ | 8 | 0 | 29 |
| 9 | ಚಿಕ್ಕಮಗಳೂರು | 0 | 14 | 6 |
| 10 | ಚಿತ್ರದುರ್ಗ | 1 | 0 | 13 |
| 11 | ದಕ್ಷಿಣ ಕನ್ನಡ | 9 | 10 | 86 |
| 12 | ದಾವಣಗೆರೆ | 8 | 9 | 8 |
| 13 | ದಾರವಾಡ | 0 | 0 | 10 |
| 14 | ಗದಗ | 0 | 11 | 18 |
| 15 | ಹಾಸನ | 18 | 0 | 46 |
| 16 | ಹಾವೇರಿ | 0 | 6 | 8 |
| 17 | ಕಲಬುರಗಿ | 9 | 4 | 94 |
| 18 | ಕೊಡಗು | 7 | 0 | 32 |
| 19 | ಕೋಲಾರ | 0 | 3 | 10 |
| 20 | ಕೊಪ್ಪಳ | 3 | 0 | 3 |
| 21 | ಮಂಡ್ಯ | 1 | 0 | 14 |
| 22 | ಮೈಸೂರು | 0 | 0 | 46 |
| 23 | ರಾಯಚೂರು | 6 | 0 | 13 |
| 24 | ರಾಮನಗರ | 1 | 0 | 1 |
| 25 | ಶಿವಮೊಗ್ಗ | 5 | 1 | 5 |
| 26 | ತುಮಕೂರು | 25 | 0 | 70 |
| 27 | ಉಡುಪಿ | 30 | 0 | 30 |
| 28 | ಉತ್ತರ ಕನ್ನಡ | 2 | 0 | 8 |
| 29 | ವಿಜಯಪುರ | 0 | 0 | 42 |
| 30 | ಯಾದಗಿರಿ | 2 | 0 | 16 |
| 31 | ಬೆಂಗಳೂರು ನಗರ (ಆರ್.ಜಿ.ಐ.ಸಿ.ಡಿ) | 2 | 0 | 8 |
| 32 | ಬಿ.ಬಿ.ಎಂ.ಪಿ. | 0 | 2 | 31 |
| ಒಟ್ಟು | | **174** | **133** | **966** |

## ಇಂದಿನ ವಿಷಯಗಳು

| | |
|---|---|
| **1** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರ ರವರು ಕೋವಿಡ್ –19 ಸಂಕ್ರಮಣದ ಅಲ್ಪ/ಪೂರ್ವ ರೂಪದ ಲಕ್ಷಣಗಳುಳ್ಳ ವ್ಯಕ್ತಿಗಳ ಮನೆ ಪ್ರತ್ಯೇಕಿತಗೊಳಿಸುವ( Home isolation) ಕುರಿತ ಮಾರ್ಗಸೂಚಿಯನ್ನು ನೀಡಿರುತ್ತಾರೆ. |
| **2** | "ನೋವೆಲ್ ಕರೋನ ವೈರಾಣು (ಕೋವಿಡ್ – 19) ಸಂಬಂಧ ದೇಶಾದ್ಯಂತ ಲಾಕ್‌ಡೌನ್ ಘೋಷಿಸಿರುವ ಹಿನ್ನೆಲೆಯಲ್ಲಿ ರಕ್ತ ನಿಧಿ ಕೇಂದ್ರಗಳಲ್ಲಿ ರಕ್ತದ ಸಂಗ್ರಹಣೆ ಕಡಿಮೆಯಾಗಿದ್ದು ಆದ್ದರಿಂದ ಗರ್ಭಿಣಿ ಮಹಿಳೆಯರಿಗೆ, ಬಾಣಂತಿಯರಿಗೆ, ಅಪಘಾತ ಸಂಭವಿಸಿದವರಿಗೆ, ರಕ್ತ ಸಂಬಂಧಿತ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ರಕ್ತವನ್ನು ಸರಿಯಾದ ಸಮಯಕ್ಕೆ ನೀಡಲು ಆಗದೇ ಇರುವುದರ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರು ಕ್ರಿಯಾ ಯೋಜನೆಯನ್ನು ರೂಪಿಸಿ ರಾಜ್ಯಾದ್ಯಂತ ಅನುಷ್ಠಾನಗೊಳಿಸಲು ನಿರ್ದೇಶಿಸಿದರು.<br>**(ಸಂಖ್ಯೆ: ಎನ್.ಹೆಚ್.ಎಂ/ಎಸ್.ಬಿ.ಸಿ/ಇ.ಬಿಎಸ್/01/2020–21 ದಿನಾಂಕ: 23–04–2020)** |
| **3** | ಮಾನ್ಯ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರು, ಸದರಿ ಕೋವಿಡ್– 19 ವೈರಾಣು ಸಂದರ್ಭದಲ್ಲಿ ರಾಜ್ಯದಲ್ಲಿ ಗರ್ಭಿಣಿ/ಪ್ರಸೂತಿ ಸೇವೆಗಳ ಕುರಿತಾಗಿ ಮಾರ್ಗಸೂಚಿಯನ್ನು ನೀಡಿದರು.<br>**(ಸಂಖ್ಯೆ: DD/MH/ 08 /2020-21 ದಿನಾಂಕ: 27–04–2020)** |
| **4** | **ಅಪರ ಕಾರ್ಯದರ್ಶಿಗಳು ಮತ್ತು ಎಂ ಡಿ - ಏನ್ ಎಚ್ ಎಂ , ಆರೋಗ್ಯ ಮತ್ತು ಕುಟುಂಬ ಕಲ್ಯಣ ಮಂತ್ರಾಲಯ , ಭಾರತ ಸರಕಾರ ರವರು, ರಾಜ್ಯಗಳಿಗೆ ಇರ್ದೇಶನ ನೀಡಲಾಗಿ, ಕೋವಿಡ್–19 ರ ನಿಯಂತ್ರಣಾ ಕಾರ್ಯಚಟುವಟಿಕೆಯಲ್ಲಿ ತೊಡಗಿರುವ (01.01.2020 to 30.06.2020) ಎಲ್ಲ ಆಶಾ ಕಾರ್ಯಕರ್ತೆ ಯವರಿಗೆ, ಈಗಾಗಲೇ ನೀಡುತ್ತಿರುವ ಗೌರವಧನ ವಲ್ಲದೆ ಹೆಚ್ಚುವರಿಯಾಗಿ ರು. ೧೦೦೦ ಪ್ರತಿ ತಿಂಗಳಂತೆ ನೀಡಲು ಕ್ರಮವಹಿಸುವಂತೆ ಸೂಚಿಸಿರುತ್ತಾರೆ.**<br>**(Ref.No D.O.V-18015/4/2020-NHM-II Dtd.20.04.2020)** |

| | |
|---|---|
| 5 | ಸಾರ್ವಜನಿಕರಿಗೆ ತೊಂದರೆಗಳನ್ನು ತಗ್ಗಿಸುವ ಸಲುವಾಗಿ, ಹೆಚ್ಚುವರಿ ಚಟುವಟಿಕೆಗಳನ್ನು ಆಯ್ಕೆ ಮಾಡಿ, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮುಖ್ಯ ಕಾರ್ಯದರ್ಶಿ ಮತ್ತು ಅಧ್ಯಕ್ಷರು ರಾಜ್ಯ ಕಾರ್ಯಕಾರಿ ಸಮಿತಿಯು COVID-19 - ಕರ್ನಾಟಕ ರಾಜ್ಯ ಏಕೀಕೃತ ಪರಿಷ್ಕೃತ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದಾರೆ.<br>Rf.No RD-158-TNR 2020 Dtd: 28.04.2020) |
| 6 | ದಿನಾಂಕ **27.04.2020** ರಂದು<br>1) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿರುವ 31 ಜ್ವರ ಚಿಕಿತ್ಸಾಲಯದಲ್ಲಿ ಒಟ್ಟು **148** ವ್ಯಕ್ತಿಗಳನ್ನು ತಪಾಸಣೆ ಮಾಡಲಾಗಿದೆ. ಈವರೆಗೂ ಒಟ್ಟಾರೆ **5557** ವ್ಯಕ್ತಿಗಳಿಗೆ ತಪಾಸಣೆ ನಡೆಸಲಾಗಿದೆ.<br>2) ರಾಜ್ಯಾದ್ಯಂತ **456** ಜ್ವರ ಚಿಕಿತ್ಸಾಲಯದಲ್ಲಿ ಒಟ್ಟು **12161** ವ್ಯಕ್ತಿಗಳನ್ನು ತಪಾಸಣೆ ಮಾಡಲಾಗಿದೆ. ಈವರೆಗೂ ಒಟ್ಟಾರೆ **145291** ವ್ಯಕ್ತಿಗಳಿಗೆ ತಪಾಸಣೆ ನಡೆಸಲಾಗಿದೆ.<br>3) ರಾಜ್ಯದ **33** ಖಾಸಗಿ ವೈದ್ಯಕೀಯ ಆಸ್ಪತ್ರೆ ಮತ್ತು ಕಾಲೇಜ್‌ಗಳಲ್ಲಿ ಒಟ್ಟು **1268** ವ್ಯಕ್ತಿಗಳನ್ನು ತಪಾಸಣೆ ಮಾಡಲಾಗಿದೆ. ಈವರೆಗೂ ಒಟ್ಟಾರೆ **7174** ವ್ಯಕ್ತಿಗಳಿಗೆ ತಪಾಸಣೆ ನಡೆಸಲಾಗಿದೆ. |
| 7 | **Home Quarantine Enforcement Squad (HQES):** ತಂಡದವರು, ಸಾರ್ವಜನಿಕರಿಂದ ಪಡೆದ ದೂರುಗಳ ಮೇರೆಗೆ ದಿನಾಂಕ **27.04.2020** ರಂದು ಒಟ್ಟು **18** ವ್ಯಕ್ತಿಗಳನ್ನು ಸಂಸ್ಥೆಗಳಲ್ಲಿ ಕ್ವಾರಂಟೈನ್ ಮಾಡಿರುತ್ತಾರೆ. ಇದೂವರೆವಿಗೂ ಒಟ್ಟಾರೆಯಾಗಿ **774** ವ್ಯಕ್ತಿಗಳನ್ನು ಮನೆ ಕ್ವಾರಂಟೈನ್‌ನಿಂದ ನಿಗಧಿತ ಸಂಸ್ಥೆಗಳಲ್ಲಿ ಕ್ವಾರನ್‌ಟೈನ್‌ಗೆ ವರ್ಗಾವಣೆ ಮಾಡಿರುತ್ತಾರೆ. |
| 08 | ನಿಯೋಜಿತ ಆಸ್ಪತ್ರೆಗಳಲ್ಲಿ ದಾಖಲಾಗಿರುವ ಕೋವಿಡ್-19 ಪಾಸಿಟಿವ್ ಪ್ರಕರಣಗಳು ಮತ್ತು ಶಂಕಿತರು ಕನಿಷ್ಠ 14 ದಿನಗಳ ಕಾಲ ಅಥವಾ ಪಾಸಿಟಿವ್ ಪ್ರಕರಣದ ಸರಣಿ ಮಾದರಿಗಳು ನೆಗೆಟಿವ್ ಎಂದು ಸಾಬೀತಾಗುವ ತನಕ ಅಥವಾ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರ ಸಲಹೆ ಸಿಗುವ ತನಕ ಸಂಬಂಧಪಟ್ಟ ವ್ಯಕ್ತಿಗಳನ್ನು ಬಿಡುಗಡೆ ಮಾಡಲಾಗುವುದಿಲ್ಲ. ಪ್ರತ್ಯೇಕ ವ್ಯವಸ್ಥೆಯಲ್ಲಿ ಇಷ್ಟೊಂದು ಸುದೀರ್ಘ ಕಾಲ ಸಂಯಮದಿಂದ ಇರಲು ಮಾನಸಿಕ ಸ್ಥೈರ್ಯದ ಅಗತ್ಯವಿರುತ್ತದೆ. **ಈ ಅಗತ್ಯವನ್ನು ಮನಗಂಡು ಇಲಾಖೆಯು ಅಂತಹ ರೋಗಿಗಳಿಗೆ ಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಸದರಿಯವರಿಗೆ** ಮಾನಸಿಕ ಆರೋಗ್ಯದ **ಸಂಪರ್ಕಿತ ಆಪ್ತ ಸಮಾಲೋಚನೆ ಸೇವೆಗಳನ್ನು ಕಲ್ಪಿಸುತ್ತಿದೆ. ಅದರಂತೆ,** ದಿನಾಂಕ **27.04.2020** ರಂದು ಒಟ್ಟು **1496** ಸಂಖ್ಯೆಯ ಮತ್ತು ಇಲ್ಲಿಯವರೆಗೂ ಒಟ್ಟಾರೆಯಾಗಿ **52762** ಸಂಖ್ಯೆಯ ಸಂಪರ್ಕಿತ ಆಪ್ತ ಸಮಾಲೋಚನೆ ಸೇವೆಗಳನ್ನು ನೀಡಲಾಗಿರುತ್ತದೆ. |
| 09 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರವು, ಕೋವಿಡ್-19ರ ಕುರಿತ ಜನಜಾಗೃತಿ ಮತ್ತು ಪರಿಣಾಮಕಾರಿ ಸಂವಹನವನ್ನು ಪ್ರಚಾರಿಸುವ ಉದ್ದೇಶದಿಂದ ದಿನಾಂಕ 09.04.2020 ರಂದು ***"ಆರೋಗ್ಯ ಸೇತು"*** ಎಂಬ ನೂತನ ಮೊಬೈಲ್ ಆ್ಯಪ್‌ನ್ನು ಬಿಡುಗಡೆಗೊಳಿಸಿದೆ. ಸಾರ್ವಜನಿಕರು ಸದರಿ ಆ್ಯಪ್‌ನ್ನು ***ಗೂಗಲ್ ಪ್ಲೇ ಸ್ಟೋರ್ ಮತ್ತು ಆ್ಯಪ್ ಸ್ಟೋರ್‌ನಲ್ಲಿ (ಆ್ಯಪಲ್)*** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. |
| 10 | ನಿಜಾಮುದ್ದೀನ್ ಮರ್ಕಜ್ ಮಸೀದಿ, ನವ ದೆಹಲಿಯಲ್ಲಿ ಜರುಗಿದ **ತಬ್ಲಿಘಿ ಝಮಾತ್ ಧರ್ಮಸಭೆಯಲ್ಲಿ** ಭಾಗವಹಿಸಿದ ಪ್ರತಿಯೊಬ್ಬರು ಸಹ ಕಡ್ಡಾಯವಾಗಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಚಿತ ಆರೋಗ್ಯ ಸಹಾಯವಾಣಿ **080-29711171**ಕ್ಕೆ ಕರೆ ಮಾಡಿ ಸಂಪರ್ಕಿಸುವುದು. |
| 11 | ಅಲ್ಪ ಸಂಖ್ಯಾತರ ಕಲ್ಯಾಣ, ವಕ್ಫ್ ಹಾಗೂ ಹಜ್ ಇಲಾಖೆಯವರು, ಕೋವಿಡ್-19 ಸಂದರ್ಭದಲ್ಲಿ ದಿನಾಂಕ 03.05.2020 ರವರೆಗೆ ಮಸಿಜ್ಜೀದ್ ಮತ್ತು ದರ್ಗಾಗಳಲ್ಲಿನ ಪ್ರಾರ್ಥನೆಗಳನ್ನು (ಸಲಾತ್) ಮತ್ತು ರಮಾದಾನ್ ಆಚರಣೆಯನ್ನು ಸ್ಥಗಿತಗೊಳಿಸುವ ಕುರಿತು ಮಾರ್ಗಸೂಚಿ ಮತ್ತು ಆದೇಶವನ್ನು ಹೊರಡಿಸಿರುತ್ತಾರೆ. (ಆದೇಶ ಸಂಖ್ಯೆ MWD/2/MDS/2020, Bengaluru ದಿನಾಂಕ 16.04.2020) |
| 12 | ಮಾನ್ಯ ಮುಖ್ಯ ಮಂತ್ರಿಗಳು ಕೋವಿಡ್-19 ನಿಯಂತ್ರಣಕ್ಕೆ ಸ್ವಇಚ್ಛೆಯಿಂದ ಟೆಲಿಮೆಡಿಸನ್ ಮುಖಾಂತರ ಸೇವೆ ಸಲ್ಲಿಸಲು ಬಯಸುವ **ವೈದ್ಯರಿಗೆ ದೂರವಾಣಿ ಸಂಖ್ಯೆ 080-47192219** ಗೆ ಮಿಸ್ಡ್ ಕಾಲ್ ನೀಡಲು ಅಥವಾ**https://forms.gle/TPbU7eZgazdxG9gS9** ನಲ್ಲಿ ಸೈನ್ ಅಪ್ ಮಾಡಿಕೊಂಡು ಸರ್ಕಾರಕ್ಕೆ ಸಹಾಯ ಮಾಡಲು ಮನವಿ ಮಾಡಿಕೊಂಡಿರುತ್ತಾರೆ. |
| 13 | ಕರೋನಾ ನಿಗಾವಣೆ / ಮೊಬೈಲ್ ಅಪ್ಲಿಕೇಷನ್‌ನ್ನು **https://covid19.karnataka.gov.in** ಈ ಮೂಲಕ ಡೌನಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಅಪ್ಲಿಕೇಷನ್‌ನಲ್ಲಿ ಕೋವಿಡ್-19 ರೋಗಿಯು ಪ್ರಯೋಗಶಾಲಾ ಫಲಿತಾಂಶಕ್ಕೆ ಮೊದಲು 14 ದಿವಸ ಪ್ರಯಾಣ ಮಾಡಿದ ವಿವಿಧ ಸ್ಥಳ / ಪ್ರದೇಶಗಳ ಮಾಹಿತಿ ಲಭ್ಯವಿರುತ್ತದೆ. ಅದರ ಜೊತೆಗೆ ಫಸ್ಟ್ ರೆಸ್‌ಪಾಂಡರ್ ಆಸ್ಪತ್ರೆಗಳ ಮಾಹಿತಿ ಹಾಗೂ ಸಹಾಯವಾಣಿಗಳ ಸಂಖ್ಯೆ ಲಭ್ಯವಿರುತ್ತದೆ. |
| 14 | **ಟೆಲಿಮೆಡಿಸನ್ ಹಾಗೂ ಆಪ್ತಮಿತ್ರ ಮತ್ತು ಸಹಾಯವಾಣಿ** |

| | |
|---|---|
| | ಕೋವಿಡ್–19 ಈ ಮಹಾಮಾರಿ ಸಂದರ್ಭದಲ್ಲಿ ಲಾಕ್‌ಡೌನ್ ಪಾಲಿಸುತ್ತಿರುವಾಗ ಜನಸಾಮಾನ್ಯರಲ್ಲಿ ಜ್ವರ, ನೆಗಡಿ, ಕೆಮ್ಮು, ಉಸಿರಾಟ ತೊಂದರೆಗಳು ಕಂಡುಬಂದಲ್ಲಿ ದೂರವಾಣಿ ಕರೆ ಮೂಲಕ ಸಾರ್ವಜನಿಕರು ಸೂಕ್ತ ಮಾರ್ಗದರ್ಶನ ಪಡೆಯಲು ಕರ್ನಾಟಕ ಸರ್ಕಾರದಿಂದ ***ಆಪ್ತಮಿತ್ರ ಆರೋಗ್ಯ ಸಹಾಯವಾಣಿ – 14410 ಯನ್ನು*** ಪ್ರಾರಂಭಿಸಲಾಗಿದೆ. |

ಆರೋಗ್ಯ ಸಹಾಯವಾಣಿ (ಶುಲ್ಕರಹಿತ ಕಾಲ್ ಸೆಂಟರ್) ಕೋವಿಡ್–19 ಕುರಿತ ಕರೆಗಳಿಗಾಗಿ **210** ಆಸನಗಳನ್ನು ಮೀಸಲಿರಿಸಿದೆ. ದಿನಾಂಕ **27.04.2020** ರಂದು **8252** ಕರೆಗಳನ್ನು ಸ್ವೀಕರಿಸಲಾಗಿದೆ.

**ಸಾರ್ವಜನಿಕರಿಗೆ ಮನವಿ:** ಕೋವಿಡ್–19 ಪೀಡಿತ ದೇಶಗಳಿಂದ ಹಿಂತಿರುಗಿರುವ ಅಥವಾ ಸೋಂಕಿತ ವ್ಯಕ್ತಿಯ ಸಂಪರ್ಕದಲ್ಲಿರುವ ಯಾರಾದರೂ ಭಾರತಕ್ಕೆ ಹಿಂತಿರುಗಿದ ದಿನದಿಂದ 14 ದಿನಗಳವರೆಗೆ, ರೋಗ ಲಕ್ಷಣಗಳು ಇರಲಿ ಅಥವಾ ಇಲ್ಲದಿರಲಿ ಮನೆಯಲ್ಲಿ ಪ್ರತ್ಯೇಕವಾಗಿರುವುದು ಹಾಗೂ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ವರದಿ ಮಾಡಿಕೊಳ್ಳುವುದು ಅಥವಾ ***14410 "ಆಪ್ತಮಿತ್ರ ಆರೋಗ್ಯ ಸಹಾಯವಾಣಿ"*** ಗೆ ಕರೆಮಾಡುವುದು.

ವೈಯಕ್ತಿಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ. ಕೆಮ್ಮುವಾಗ ಅಥವಾ ಸೀನುವಾಗ ಕರವಸ್ತ್ರ / ಟಿಶ್ಯೂ ಪೇಪರನ್ನು ಬಳಸಿ, ಕೈ ಸ್ವಚ್ಛಗೊಳಿಸುವ ದ್ರಾವಣ (ಸ್ಯಾನಿಟೈಸರ್) ಅಥವಾ ನೀರು ಮತ್ತು ಸೋಪು ಬಳಸಿ ಆಗಾಗ ಕೈಗಳನ್ನು ತೊಳೆದುಕೊಳ್ಳಿ ಮತ್ತು ಸಾಮಾಜಿಕ ಸಮೂಹ ಗುಂಪು ಸೇರುವಿಕೆಯನ್ನು ಮಾಡಬೇಡಿ.

**ಆರೋಗ್ಯ ಸಹಾಯವಾಣಿ ಸಂಖ್ಯೆ *14410* ಕ್ಕೆ ಹಾಗೂ**
**9745697456, 080–46848600, 080–66692000 ಕ್ಕೆ ಕರೆಮಾಡಿ**

***ನಿಮಗೆ ಸಹಾಯ ಮಾಡಲು ನಮಗೆ ನೆರವು ನೀಡಿ***
***ನಾವೆಲ್ಲರೂ ಒಟ್ಟಾಗಿ ಕೋವಿಡ್–19 ವಿರುದ್ಧ ಹೋರಾಡೋಣ***
***ಮನೆಯಲ್ಲಿಯೇ ಇರಿ, ಸುರಕ್ಷಿತವಾಗಿರಿ***

ಎಲ್ಲ ರೀತಿಯ ಮಾರ್ಗಸೂಚಿಗಳು ಮತ್ತು ಸಲಹೆಗಳಿಗಾಗಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಾಲತಾಣದಲ್ಲಿ ಲಭ್ಯವಿದೆ: **https://karunadu.karnataka.gov.in/hfw/kannada/Pages/covid-19.aspx** ಹಾಗೂ ಕರ್ನಾಟಕ ಸರ್ಕಾರದ ಅಧಿಕೃತ ಕೋವಿಡ್–19 ಮಾಹಿತಿ ಜಾಲತಾಣ **https://covid19.karnataka.gov.in**

***********